498(71) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ) ಮಾನ್ಯ ಕೈಗಾರಿಕೆ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೇವನಹಳ್ಳಿ ಬಳಿ ನಿರ್ಮಾಣಗೊಳ್ಳಲಿರುವ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ಇಲ್ಲಿಯವರೆಗೂ ಆಗಿರುತಕ್ಕ ಸರ್ಕಾರದ ಕಾರ್ಯಕ್ರಮಗಳೇನು?

ಆ) ಇದರ ನಿರ್ಮಾಣ ಕಾರ್ಯವನ್ನು ತೆಗೆದುಕೊಂಡಿರುವ ಸಂಸ್ಥೆ ಯಾವುದು? ಇದಕ್ಕಾಗಿ ಅವಶ್ಯಕತೆ ಇರುವ ಜಮೀನು ಎಷ್ಟು?

ಇ) ನಿರ್ಮಾಣಕ್ಕೆ ಬೇಕಾಗಿರುವ ಸರ್ಕಾರಿ ಜಮೀನು ಹಾಗೂ ರೈತರ ಜಮೀನು ಎಷ್ಟು?

ಈ) ರೈತರ ಜಮೀನು ಸ್ವಾಧೀನಪಡಿಸಿಕೊಂಡಲ್ಲಿ ಒಂದು ಎಕರೆಗೆ ನೀಡಲಾಗುವ ಹಣ ಎಷ್ಟು? ಈವರೆಗೆ ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ(ಕೈಗಾರಿಕೆ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು) :

i) ಭಾರತ ಸರ್ಕಾರವು ರಿಯಾಯಿತಿ ಒಪ್ಪಂದವನ್ನು ಬೆಂಗಳೂರು ಇಂಟರ್ ನ್ಯಾಷನಲ್ ಏರ್ ಪೋರ್ಟ್ ಲಿಮಿಟೆಡ್ (ಬಿ.ಐ.ಎ.ಎಲ್) ದಿನಾಂಕ 05–7–2004 ರಂದು ಸಹಿ ಮಾಡಿದೆ.

ii) ಕೇಂದ್ರ ರಕ್ಷಣೆ ಸಚಿವಾಲಯವು ದೇವನಹಳ್ಳಿಯಲ್ಲಿ ವಿಮಾನ ನಿಲ್ದಾಣ ಕಾರ್ಯಕ್ಕೆ ಕೆಲವು ಷರತ್ತುಗಳೂಡನೆ "ನಿರಾಕ್ಷೇಪಣಾ" ಪತ್ರವನ್ನು (ಬಿ ಡಿ ಎ ಎಲ್)ರವರಿಗೆ ನೀಡಿದೆ.

iii) ಡಿಜಿಸಿಎ ರವರು ದೇವನಹಳ್ಳಿಯ ನಿವೇಶನವನ್ನು ಪರೀಕ್ಷಿಸಿ, ತಾತ್ವಿಕ ಒಪ್ಪಿಗೆಯನ್ನು ನೀಡಿರುತ್ತಾರೆ.

iv) ರಾಜ್ಯ ಸರ್ಕಾರವು ರಾಜ್ಯ ನೆರವು/ಒತ್ತಾಸೆ ಒಪ್ಪಂದವನ್ನು ಬಿ.ಐ.ಎ.ಎಲ್ ನವರೂಂದಿಗೆ ದಿನಾಂಕ 20–01–2005 ರಂದು ಸಹಿ ಮಾಡಿರುತ್ತಾರೆ.

v) ರಾಜ್ಯ ಸರ್ಕಾರವು ಕೆ.ಎಸ್.ಎಸ್.ಡಿ.ಸಿ. ಮುಖಾಂತರ ಭೂಮಿ ಗುತ್ತಿಗೆ ಒಪ್ಪಂದವನ್ನು ಬಿ.ಐ.ಎ.ಎಲ್. ನವರೊಂದಿಗೆ ದಿನಾಂಕ 20–01–05 ರಂದು ಸಹಿ ಮಾಡಿರುತ್ತಾರೆ.

vi) ಅಲ್ಪ ವಿಸ್ತೀರ್ಣದ ಹೆಚ್ಚುವರಿ ಭೂಮಿಯನ್ನು ಹೊರತುಪಡಿಸಿ ಭೂ ಸ್ವಾಧೀನ ಕಾರ್ಯವು ಪೂರ್ಣಗೊಂಡಿದೆ.

ಆ) ವಿಮಾನ ನಿಲ್ದಾಣ ಅಭಿವೃದ್ಧಿ, ನಿರ್ಮಾಣ ನಿರ್ವಹಣೆ ಮತ್ತು ಪೋಷಣೆ ಇವುಗಳಿಗೆ ಬಿ.ಐ.ಎ.ಎಲ್ ಸಂಸ್ಥೆ ಜವಾಬ್ದಾರಿಯಾಗಿದೆ. ಬಿ.ಐ.ಎ.ಎಲ್ ಸಂಸ್ಥೆಯು EPC ಗುತ್ತಿಗೆಯನ್ನು M/s L & T Limited, M/s Siemens India Ltd., ಮತ್ತು Germany ಇವರಿಗೆ ನೀಡಲು ಉದ್ದೇಶಿಸಿದೆ. ಇದ್ದಕ್ಕಾಗಿ ಸುಮಾರು 4000 ಎಕರೆಗಳಷ್ಟು ಜಮೀನಿನ ಅವಶ್ಯಕತೆ ಇದೆ.

ಇ) ಅರಣ್ಯ ಇಲಾಖೆಯ ಜಮೀನನ್ನು ಒಳಗೊಂಡಂತೆ ಸುಮಾರು 1750 ಎಕರೆ ಸರ್ಕಾರಿ ಜಮೀನು ಹಾಗೂ 2250 ಎಕರೆ ರೈತರ ಜಮೀನು ನಿರ್ಮಾಣಕ್ಕೆ ಬೇಕಾಗಿದೆ.

ಈ) ಸ್ವಾಧೀನ ಪಡಿಸಿಕೊಂಡಿರುವ ರೈತರ ಜಮೀನಿಗೆ ಎಕರೆ ಒಂದಕ್ಕೆ ರೂ. 5 ಲಕ್ಷ ಪರಿಹಾರ

ಧನವನ್ನು ನೀಡಲಾಗಿದೆ. ಇದಲ್ಲದೆ, ಜಮೀನಿನಲ್ಲಿರುವ ಮರಮುಟ್ಟುಗಳ ಹಾಗೂ ಕಟ್ಟಡಗಳಿಗೆ ಪರಿಹಾರಧನವನ್ನು ನೀಡಲಾಗಿದೆ. ಇದುವರೆವಿಗೂ ಸುಮಾರು 1150 ರೈತರಿಗೆ ಪರಿಹಾರ ಧನವನ್ನು ಪಾವತಿಸಲಾಗಿದೆ.

499(136) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೊಲ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕೆಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ತಾಲ್ಲೂಕು ಆರ್ಟಿಜನ್ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು ಹಾಗೂ ಯಾವುವು;

ಆ) ಇವುಗಳಿಗೆ ಸರಕಾರ ಹಾಗೂ ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಕೊಟ್ಟಿರುವ ಧನಸಹಾಯ 31.3.04ಕ್ಕೆ ಎಷ್ಟು;

ಇ) ಈ ಸಂಘಗಳು 31.3.04ಕ್ಕೆ ಗಳಿಸಿರುವ ಹಾಗೂ ಕೂಡಿಟ್ಟಿರುವ ಲಾಭ ಮತ್ತು ಹಾನಿ ಎಷ್ಟು;

ಈ) ಈ ಸಂಘಗಳ 2003–04ರಲ್ಲಿ ಮಾಡಿದ ವ್ಯವಹಾರ ವಹಿವಾಟು ಮೊತ್ತವೆಷ್ಟು;

ಉ) ಈ ಸಂಘಗಳ ಪೈಕಿ ಕಾರ್ಯನಿರತ, ಸ್ಥಗಿತ ಹಾಗೂ ಸಮಾಪನ ಸಂಘಗಳು 31.3.04ಕ್ಕೆ ಎಷ್ಟು;

ಶ್ರೀ ಪಿ.ಜಿ.ಆರ್.ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) 159. (ಪಟ್ಟಿ ಲಗತ್ತಿಸಿದೆ)

ಆ) ದಿನಾಂಕ : 31.3.2004ಕ್ಕೆ ಸರ್ಕಾರದಿಂದ ಹಾಗೂ ಖಾದಿ ಮಂಡಳಿಯಿಂದ ನೀಡಿರುವ ಆರ್ಥಿಕ ಸಹಾಯ ಕ್ರಮವಾಗಿ ರೂ. 18,85,835 ಮತ್ತು ರೂ. 3,89,39,224 ಒಟ್ಟು 4,08,25,056 ರೂ. ಗಳನ್ನು 159 ಆರ್ಟಿಜನ್ ಸಹಕಾರಿಸಂಘಗಳಿಗೆ ನೀಡಲಾಗಿದೆ.

ಇ) ದಿನಾಂಕ : 31.3.2004ಕ್ಕೆ ಲಾಭ ರೂ. 8.63 ಲಕ್ಷ, ಹಾನಿ ರೂ. 133.43 ಲಕ್ಷ.

ಈ) 2003–04ನೇ ಸಾಲಿನಲ್ಲಿ ಈ ಸಂಘಗಳು ಮಾಡಿದ ವ್ಯವಹಾರ ವಹಿವಾಟು ಮೊತ್ತ ರೂ. 1098.64 ಲಕ್ಷ.

ಉ) ದಿನಾಂಕ: 31.3.2004ಕ್ಕೆ ತಾಲ್ಲೂಕು ಆರ್ಟಿಜನ್ ಸಹಕಾರಿಸಂಘಗಳು ಈ ಕೆಳಕಂಡ ಸ್ಥಿತಿಯಲ್ಲಿರುತ್ತವೆ:

01) ಕಾರ್ಯನಿರತ : 71

02) ಸ್ಥಗಿತ : 38

03) ಸಮಾಪನ : 50